ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 08–10–2021

# ಮಾಧ್ಯಮ ಆಹ್ವಾನ
# Media Invitation

## 1. ಉದ್ಯಮಿಯಾಗು – ಉದ್ಯೋಗ ನೀಡು ಕಾರ್ಯಾಗಾರ:

ಉದ್ಘಾಟನೆ:
ಬಸವರಾಜ ಎಸ್ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ವಿಶೇಷ ಆಹ್ವಾನಿತರು:
ಶ್ರೀಮತಿ ನಿರ್ಮಲಾ ಸೀತಾರಾಮನ್,
ಮಾನ್ಯ ಕೇಂದ್ರ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ

ಪ್ರಹ್ಲಾದ ಜೋಶಿ,
ಮಾನ್ಯ ಕೇಂದ್ರ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಸಚಿವರು, ಭಾರತ ಸರ್ಕಾರ

ರಾಜೀವ್ ಚಂದ್ರಶೇಖರ್,
ಮಾನ್ಯ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು, ಭಾರತ ಸರ್ಕಾರ

ಘನ ಉಪಸ್ಥಿತಿ:
ಮುರುಗೇಶ್ ಆರ್. ನಿರಾಣಿ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು, ಕರ್ನಾಟಕ ಸರ್ಕಾರ.

ಅಧ್ಯಕ್ಷತೆ:
ಡಾ. ಸಿ.ಎನ್.ಅಶ್ವತ್ಥನಾರಾಯಣ
ಮಾನ್ಯ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು, ಕರ್ನಾಟಕ ಸರ್ಕಾರ.

ದಿನಾಂಕ: 11–10–2021 ಸೋಮವಾರ, ಸಮಯ: ಬೆಳಿಗ್ಗೆ 10.30 ಗಂಟೆಗೆ

ಸ್ಥಳ: ಬೆಂಗಳೂರು ಅರಮನೆ, ಬೆಂಗಳೂರು.

**2. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಶಿಕ್ಷಕರು ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆ ಉಪನ್ಯಾಸಕರ ಸಮಸ್ಯೆಗಳ ಕುರಿತು ಸಭೆ:**

**ಅಧ್ಯಕ್ಷತೆ:**
**ಬಸವರಾಜ ಹೊರಟ್ಟಿ,**
**ಮಾನ್ಯ ಸಭಾಪತಿಗಳು, ವಿಧಾನ ಪರಿಷತ್ತು.**

**ದಿನಾಂಕ: 11–10–2021 ಸೋಮವಾರ, ಸಮಯ: ಮಧ್ಯಾಹ್ನ 3.00 ಗಂಟೆಗೆ**

**ಸ್ಥಳ: ಕೊಠಡಿ ಸಂಖ್ಯೆ: 106, ಒಂದನೇ ಮಹಡಿ, ವಿಧಾನಸೌಧ, ಬೆಂಗಳೂರು.**

# ಪತ್ರಿಕಾ ಪ್ರಕಟಣೆ

**PRESS RELEASE**

## ದಸರಾ ಹಬ್ಬದ ಪ್ರಯುಕ್ತ 1000 ಹೆಚ್ಚುವರಿ ವಿಶೇಷ ಸಾರಿಗೆ ವ್ಯವಸ್ಥೆ

ಬೆಂಗಳೂರು, ಅಕ್ಟೋಬರ್ 08 (ಕರ್ನಾಟಕ ವಾರ್ತೆ):

ದಸರಾ ಹಬ್ಬದ ಪ್ರಯುಕ್ತ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಬೆಂಗಳೂರಿನಿಂದ ರಾಜ್ಯದೊಳಗಿನ ಸ್ಥಳಗಳಾದ ಧರ್ಮಸ್ಥಳ, ಕುಕ್ಕೆಸುಬ್ರಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ಮೈಸೂರು, ಮಡಿಕೇರಿ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್ ಮುಂತಾದ ಸ್ಥಳಗಳಿಗೆ ಮತ್ತು ಅಂತರರಾಜ್ಯದ ತಿರುಪತಿ, ವಿಜಯವಾಡ, ಹೈದರಾಬಾದ್, ತಿರುವನಂತಪುರಂ, ಕೊಟ್ಟಾಯಂ, ಚೆನ್ನೈ, ಕೊಯಮತ್ತೂರು, ಪೂನಾ, ಪಣಜಿ ಮುಂತಾದ ಸ್ಥಳಗಳಿಗೆ ಹಾಗೂ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ಅಕ್ಟೋಬರ್ 13 ರಿಂದ ಅಕ್ಟೋಬರ್ 21 ರವರೆಗೆ 1000 ಹೆಚ್ಚುವರಿ ವಿಶೇಷ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುವುದು.

ಹೆಚ್ಚುವರಿ ವಿಶೇಷ ಸಾರಿಗೆಗಳ ಪ್ರಯಾಣ ದರಗಳಲ್ಲಿ ಯಾವುದೇ ಹೆಚ್ಚಳ ಇರುವುದಿಲ್ಲ. ಕರಾರಸಾ ನಿಗಮದ ವೆಬ್‌ಸೈಟ್ www.ksrtc.karnataka.gov.in ಹಾಗೂ ಕರ್ನಾಟಕ ಮತ್ತು ಅಂತರರಾಜ್ಯದಲ್ಲಿರುವ ಗಣಕೀಕೃತ ಬುಕಿಂಗ್ ಕೌಂಟರ್‌ಗಳ ಮುಖೇನ ಈ ಸಾರಿಗೆಗಳಿಗೆ ಮುಂಗಡ ಆಸನ ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದೆ.

ಸಾರ್ವಜನಿಕ ಪ್ರಯಾಣಿಕರು ಹೆಚ್ಚುವರಿ ವಿಶೇಷ ಸಾರಿಗೆಗಳ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ನಿಗಮದ ಪ್ರಕಟಣೆ ತಿಳಿಸಿದೆ.

## ಚಿತ್ರಕಲಾ ಪರಿಷತ್ತಿನಲ್ಲಿ ದಸರಾ ಗೊಂಬೆಗಳು ಹಾಗೂ ಅಲಂಕಾರಿಕ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ

**ಬೆಂಗಳೂರು ಅಕ್ಟೋಬರ್ 08 (ಕರ್ನಾಟಕ ವಾರ್ತೆ):**

ನಾಡ ಹಬ್ಬ ದಸರಾ ಅಂಗವಾಗಿ ಇಂದಿನಿಂದ 10 ದಿನಗಳ ಕಾಲ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ **ದಸರಾ ಗೊಂಬೆಗಳ ವಿಶೇಷ ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಆಯೋಜಿಸಲಾಗಿದ್ದು, ನಟಿ ಸುಶ್ಮಿತಾ ಸಿದ್ದಪ್ಪ ಹಾಗೂ ಸಿಂಧೂ ಗೌಡ ಚಾಲನೆ ನೀಡಿದರು.**

**ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಂತರ ನಟಿ ಸುಶ್ಮಿತಾ ಸಿದ್ದಪ್ಪ ಮಾತನಾಡಿ,** ಚಿತ್ತಾರ ಹಾಗೂ ಗ್ರಾಂಡ್ ಫ್ಲಿಯಾ ಮಾರ್ಕೆಟ್ ಸಹಯೋಗದಲ್ಲಿ ಆಯೋಜಿಸಲಾಗಿರುವ ಈ ಮಾರಾಟ ಮೇಳದಲ್ಲಿ ದಸರಾ ಆಲಂಕಾರಕ್ಕೆ ಬೇಕಾಗಿರುವ ವಿಶೇಷ ಗೊಂಬೆಗಳು ಹಾಗೂ ಇನ್ನಿತರ ವಸ್ತುಗಳ ಒಂದೇ ವೇದಿಕೆಯ ಅಡಿಯಲ್ಲಿ ದೊರೆಯಲಿವೆ. ಪ್ರತಿ ದಸರಾ ಸಂಧರ್ಭದಲ್ಲೂ ತಮ್ಮ ಬೊಂಬೆಗಳ ಸಂಗ್ರಹದಲ್ಲಿ ಹೊಸತನ ಕಾಪಾಡುವ ನಿಟ್ಟಿನಲ್ಲಿ ಗ್ರಾಹಕರು ಕೆಲವೊಂದು ಗೊಂಬೆಗಳನ್ನು ಖರೀದಿಸುವುದು ನಡೆದು ಬಂದಿರುವ ಸಂಪ್ರದಾಯ. ಇಂತಹ ಸಂಪ್ರದಾಯಕ್ಕೆ ಪುಷ್ಠಿ ಕೊಡುವ ನಿಟ್ಟಿನಲ್ಲಿ ಹಾಗೂ ದಸರಾ ಹಬ್ಬಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಒಂದೇ ವೇದಿಕೆಯಡಿಯಲ್ಲಿ ಕೊಂಡುಕೊಳ್ಳಬಹುದಾಗಿದೆ ಎಂದು ಹೇಳಿದರು.

**ನಟಿ ಸಿಂಧೂ ಗೌಡ ಮಾತನಾಡಿ,** ನಗರದ ಹೃದಯಭಾಗದಲ್ಲಿ ಆಯೋಜಿಸಲಾಗಿರುವ ಈ ಮೇಳದಲ್ಲಿ ಎಲ್ಲಾ ರೀತಿಯ ಗೊಂಬೆಗಳನ್ನು ನೋಡಬಹುದಾಗಿದೆ. ಅಲ್ಲದೆ, ನಮಗಿಷ್ಟವಾದವುಗಳನ್ನು ಖರೀದಿಸಬಹುದಾಗಿದೆ. ಇದಲ್ಲದೆ, ಹಬ್ಬಕ್ಕೆ ಬೇಕಾಗುವಂತಹ ಉಡುಪ ಹಾಗೂ ಉಡುಗೊರೆಗಳು ಇಲ್ಲಿ ಲಭ್ಯವಿವೆ. ಕರಕುಶಲ ಕರ್ಮಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಜನರು ಇಂತಹ ಮೇಳಕ್ಕೆ ಭೇಟಿ ನೀಡಿ ಖರೀದಿಸಬೇಕು ಎಂದು ಕರೆ ನೀಡಿದರು.

ಅಕ್ಟೋಬರ್ 8 ರಿಂದ 17 ರ ವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಇಂಡಿಯನ್ ಆರ್ಟಿಸನ್ಸ್ ಕರಕುಶಲ ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಆಯೋಜಿಸಲಾಗಿದೆ. 80 ಕ್ಕೂ ಹೆಚ್ಚು ಅಂಗಡಿಗಳಿದ್ದು ದೇಶದ ಎಲ್ಲಾ ಭಾಗಗಳಿಂದ ಆಗಮಿಸಿರುವ ಕಲಾವಿದರುಗಳು ತಮ್ಮ ಕಲೆಯನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ. ಮಣ್ಣು, ಕಲ್ಲು, ಮರ ಹಾಗೂ ಲೋಹಗಳನ್ನು ಬಳಸಿ ತಯಾರಿಸಿರುವ ಗೊಂಬೆಗಳು ಪ್ರಮುಖ ಆಕರ್ಷಣೆಯಾಗಿವೆ.

## ಪ್ಲಾಸ್ಟಿಕ್ ತ್ಯಾಜ್ಯ  ಸಂಗ್ರಹ ಮಾಡುವ ಸ್ವಚ್ಚತಾ ಕಾರ್ಯಕ್ರಮ

ಬೆಂಗಳೂರು, ಅಕ್ಟೋಬರ್ 08 (ಕರ್ನಾಟಕ ಸರ್ಕಾರ):

ಭಾರತ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದು 75ನೇ ವರ್ಷ ತುಂಬಿದ ಸಂದರ್ಭದಲ್ಲಿ "ಆಜಾದಿಕಾ ಅಮೃತ ಮಹೋತ್ಸವ" ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಈ ವರ್ಷದ ಅಕ್ಟೋಬರ್ 1 ರಿಂದ 31ರ ವರೆವಿಗೆ "ಕ್ಲೀನ್ ಇಂಡಿಯಾ" ಎಂಬ ಶೀರ್ಷಿಕೆಯ ಅಡಿ " ಪ್ಲಾಸ್ಟಿಕ್ ತ್ಯಾಜ್ಯ" (single use plastic) ಸಂಗ್ರಹ ಮಾಡುವ ಸ್ವಚ್ಚತಾ ಕಾರ್ಯಕ್ರಮವನ್ನು ನಗರ, ಪಟ್ಟಣ, ಹಳ್ಳಿಗಳಲ್ಲಿ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮವನ್ನು ಎಲ್ಲಾ 744 ಜಿಲ್ಲೆಗಳಲ್ಲಿ ನಡೆಯಲಿದ್ದು 2,50,000 ಸಾವಿರ ಹಳ್ಳಿಗಳನ್ನು ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿ ಮಾಡಿ ಸ್ವಚ್ಚಗೊಳಿಸುವ ಗುರಿಯನ್ನು ಹೊಂದಿದೆ.

ಈ ಎಲ್ಲಾ ಕಾರ್ಯಕ್ರಮವನ್ನು ನೆಹರು ಯುವ ಕೇಂದ್ರ, ಎನ್ ಎಸ್ ಎಸ್, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ಗ್ರಾಮ ಪಂಚಾಯತಿ, ಎಲ್ಲಾ ಇಲಾಖೆಗಳು ಸೇರಿ ಸ್ವಯಂ ಸೇವಾ ಸಂಸ್ಥೆಗಳ, ರೋಟರಿ, ಲಯನ್ಸ್, ಯುವಕ ಸಂಘಗಳ, ಯುವತಿ ಮಂಡಳಿಗಳು ಸೇರಿದಂತೆ ಸಮಾಜದ ಎಲ್ಲಾ ವರ್ಗದ ಜನರು ಪಾಲ್ಗೊಳ್ಳಲು ಅವಕಾಶ ನೀಡಿ ಜನಾಂದೋಲನವಾಗಿ ರೂಪಿಸಲಾಗಿದೆ.

ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹ, ತೂಕ ಹಾಗೂ ವಿಲೇವಾರಿ, ಹಳ್ಳಿಗಳ ಸೌಂದರೀಕರಣ ಕೆರೆ, ಬಾವಿ, ಧಾರ್ಮಿಕಸ್ಥಳಗಳ, ಯುವಕ ಸಂಘಗಳ ಕಟ್ಟಡ, ಶಾಲೆ, ಆರೋಗ್ಯ ಕೇಂದ್ರ, ಗ್ರಾಮ ಪಂಚಾಯಿತಿ ಕಟ್ಟಡಗಳ ಸ್ವಚ್ಚತೆ. ಸಾಂಪ್ರದಾಯಕ ನೀರಿನ ಮೂಲಗಳ ಸ್ವಚ್ಚತೆ, ಕೆರೆ ಬಾವಿಗಳ ಸ್ವಚ್ಚತೆ ಶ್ರಮಾದಾನದ ಮೂಲಕ ರೈಲ್ವೆ ಸಿಬ್ಬಂದಿ ಹಾಗೂ ಉದ್ಯೋಗಿಗಳೊಂದಿಗೆ 9-10-2021, ಪೋಲಿಸ್ ಸಿಬ್ಬಂದಿ, ಮಾದ್ಯಮ ಪ್ರತಿನಿಧಿಗಳು ಹಾಗೂ ಸಿ.ಆರ್.ಪಿ.ಎಫ್. 10-10-2021 ರಾಜಕೀಯ ಮುಖಂಡರು ಹಾಗೂ ಚುನಾಯಿತ ಪ್ರತಿನಿಧಿಗಳೊಂದಿಗೆ 11-10-2021 ರಿಂದ 12-10-2021 ಸರ್ಕಾರೇತರ ಸಂಘಗಳೊಂದಿಗೆ, 13-10-2021 ರಿಂದ 14-10-2021 ವ್ಯಾಪಾರಿಗಳೊಂದಿಗೆ, 18-10-2021 ರಿಂದ 19-10-2021 ಮಹಿಳಾ ಗುಂಪುಗಳೊಂದಿಗೆ, 20-10-2021 ರಿಂದ 21-10-2021 ಶಿಕ್ಷಕರೊಂದಿಗೆ, 22-10-2021 ರಿಂದ 23-10-2021 ಸಿನಿಮಾ ಹಾಗೂ ಟಿ.ವಿ. ಉದ್ಯಮದವರೊಂದಿಗೆ, 24-10-2021 ಅರಣ್ಯ ಇಲಾಖೆಯ ಸಿಬ್ಬಂದಿ ಹಾಗೂ ಶಿಕ್ಷಕರೊಂದಿಗೆ, 25-10-2021 ರಿಂದ 26-10-2021, ಟೆಲಿಕಾಂ ಹಾಗೂ ಪೋಸ್ಟಲ್ ಸಿಬ್ಬಂದಿಯೊಂದಿಗೆ 27-10-2021 ರಿಂದ 28-10-2021, ಅಧಿಕಾರಿಗಳೊಂದಿಗೆ 29-10-2021 ರಿಂದ 30-10-2021, ಎನ್ ಎಸ್ ಎಸ್. ಎನ್ ವೈ ಕೆ ಎಸ್ ಯುವಕರೊಂದಿಗೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

1-10-2021 ರಿಂದ 31-10-2021 ರವರೆಗೆ ಒಂದು ತಿಂಗಳ ಅವಧಿಯಲ್ಲಿ ದೇಶದ 744 ಜಿಲ್ಲೆಗಳಲ್ಲಿ 75 ಲಕ್ಷ ಕೆಜಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸುವ ಗುರಿಯನ್ನು ಹೊಂದಿದೆ. ದೇಶದ 744 ಜಿಲ್ಲೆಗಳಿಂದ ತಲಾ 10,080 ಕೆ.ಜಿ. ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹದ ಗುರಿಯನ್ನು ಹೊಂದಿದೆ. ಅಂದರೆ ಪ್ರತಿ ಹಳ್ಳಿಯಿಂದ 30 ಕೆಜಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡುವ ಗುರಿಯನ್ನು ಹೊಂದಿದೆ.

ಈ ಎಲ್ಲಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ರಾಜ್ಯಮಟ್ಟದಲ್ಲಿ ಅಪರ ಮುಖ್ಯ ಕಾರ್ಯದರ್ಶಿ, ಯುವ ಸಬಲೀಕರಣ ಇಲಾಖೆ ಹಾಗೂ ಎನ್ ವೈ ಕೆ ಎಸ್.ನ ಕರ್ನಾಟಕ ರಾಜ್ಯ ನಿರ್ದೇಶಕರು ಸೇರಿದಂತೆ ಇತರೆ ಇಲಾಖೆಯ ಹಿರಿಯ ಅಧಿಕಾರಿಗಳು ಸೇರಿದಂತೆ ರಾಜ್ಯ ಸಮಿತಿ ರಚಿಸಲಾಗಿದ್ದು ಈ ಸಮಿತಿ ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರಾದ ಕೆ.ಸಿ. ನಾರಾಯಣ ಗೌಡರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಲಿದೆ.

ಈ ಎಲ್ಲಾ ಕಾರ್ಯಕ್ರಮವನ್ನು ನೆಹರು ಯುವ ಕೇಂದ್ರ, ಎನ್.ಎಸ್.ಎಸ್, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ಗ್ರಾಮ ಪಂಚಾಯತಿ, ಎಲ್ಲಾ ಇಲಾಖೆಗಳು ಸೇರಿ ಸ್ವಯಂ ಸೇವಾ ಸಂಸ್ಥೆಗಳ, ರೋಟರಿ, ಲಯನ್ಸ್, ಯುವಕ ಸಂಘಗಳು, ಯವತಿ ಮಂಡಳಿಗಳು ಸೇರಿದಂತೆ ಸಮಾಜದ ಎಲ್ಲಾ ವರ್ಗದ ಜನರು ಪಾಲ್ಗೊಳ್ಳಲು ಅವಕಾಶ ನೀಡಿ ಜನಾಂದೋಲನವಾಗಿ ರೂಪಿಸಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಆಯಾಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿಗಳು ಸದಸ್ಯ ಕಾರ್ಯದರ್ಶಿಯಾಗಿ ಇತರೆ ಇಲಾಖಾ ಅಧಿಕಾರಿಗಳು ಸಮಿತಿಯಲ್ಲಿ ಇರುತ್ತಾರೆ.

"ಕ್ಲೀನ್ ಇಂಡಿಯಾ" ಕಾರ್ಯಕ್ರಮದಲ್ಲಿ ಎಲ್ಲಾ ವರ್ಗದ ಜನರು ಯಾವುದೇ ಜಾತಿ, ಮತ, ಆಸ್ತಿ, ಅಂತಸ್ತು, ಧರ್ಮ, ಪಕ್ಷ ಪಂತಗಳ ಭೇದವಿಲ್ಲದೆ ಪಾಲ್ಗೊಳ್ಳಬೇಕೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಹವಾನಿಯಂತ್ರಿತ ಸಾರಿಗೆ ಪುನರಾರಂಭ

ಬೆಂಗಳೂರು, ಅಕ್ಟೋಬರ್ 08 (ಕರ್ನಾಟಕ ವಾರ್ತೆ):

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಮಾರ್ಗ ಸಂಖ್ಯೆ ಕೆಐಎ-14 ರಲ್ಲಿ ಹವಾನಿಯಂತ್ರಿತ ಸಾರಿಗೆಯನ್ನು ಪುನರಾರಂಭಿಸಿ ಕಾರ್ಯಾಚರಿಸಲಾಗುತ್ತಿದ್ದು, ಡಿಎಲ್ಎಫ್ ಅಪಾರ್ಟ್ ಮೆಂಟ್, ಬನ್ನೇರುಘಟ್ಟ ರಸ್ತೆಯಿಂದ 5:30, 6:30, 7:30,10:00, 11:00, 12:00, 19:35, 20:50, 21:50 ನಿರ್ಗಮನದ ಸಮಯವಾಗಿದ್ದು, ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ದಿಂದ ನಿರ್ಗಮನದ ಸಮಯವು 7:50, 8:45, 10:00, 17:30, 18:30, 19:30, 21:40, 22:45, 23:45 ರವರೆಗೆ ನಿಗಧಿಪಡಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ನಿರ್ಗಮನ ಪಥ ಸಂಚಲನ ಕಾರ್ಯಕ್ರಮ

ಬೆಂಗಳೂರು, ಅಕ್ಟೋಬರ್ 08 (ಕರ್ನಾಟಕ ಸರ್ಕಾರ):

ಸಶಸ್ತ್ರ ಪೊಲೀಸ್ ತರಬೇತಿ ಶಾಲೆಯಲ್ಲಿ ಮೂಲ ತರಬೇತಿ ಪಡೆಯುತ್ತಿರುವ 7ನೇ ತಂಡದ ಸಿಪಿಸಿ, 33ನೇ ತಂಡದ ಎಪಿಸಿ ಮತ್ತು 03ನೇ ತಂಡದ ಪಿಸಿ–ಕೆಎಸ್ಐಎಸ್ಎಫ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮವು ಅಕ್ಟೋಬರ್ 13 ರಂದು ನಿಗಧಿಪಡಿಸಲಾಗಿದೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾನ್ಯ ಗೃಹ ಸಚಿವರಾದ ಅರಗ ಜ್ಞಾನೇಂದ್ರ ಅವರು ಭಾಗವಹಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕ್ರೀಡಾ ತರಬೇತುದಾರರಿಂದ ಅರ್ಜಿ ಆಹ್ವಾನ

ಬೆಂಗಳೂರು, ಅಕ್ಟೋಬರ್ 08 (ಕರ್ನಾಟಕ ಸರ್ಕಾರ):

ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಕ್ರೀಡಾ ತರಬೇತುದಾರರನ್ನು ತಾಲ್ಲೂಕು, ಜಿಲ್ಲಾ ಕೇಂದ್ರ, ಕ್ರೀಡಾ ಅಕಾಡೆಮಿ ಹಾಗೂ ಇತರ ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡುವ ಸಲುವಾಗಿ ಸೆಪ್ಟೆಂಬರ್ 2022 ರ ಅಂತ್ಯದವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಬಾಕ್ಸಿಂಗ್ ತರಬೇತುದಾರ ಪುರುಷ–1, ಕಬ್ಬಡ್ಡಿ ತರಬೇತುದಾರ ಮಹಿಳೆ–1, ಹುದ್ದೆಗಳು ಖಾಲಿಯಿದ್ದು, ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ತರಬೇತುದಾರರಿಗೆ ಮಾಸಿಕ ವೇತನ 39,960 ರೂಗಳು ವೇತನ ನೀಡಲಾಗುವುದು. ತರಬೇತುದಾರರು ಪದವಿ ಮತ್ತು ರಾಷ್ಟ್ರೀಯ ಕ್ರೀಡಾ ಶಿಕ್ಷಣ (ಎನ್ಎಸ್ ಎನ್ಐಎಸ್)/ಭಾರತೀಯ ಕ್ರೀಡಾ ಪ್ರಾಧಿಕಾರ ಸಂಸ್ಥೆಯಿಂದ ಒಂದು ವರ್ಷದ ಡಿಪ್ಲೋಮಾ/ ಏಷ್ಯನ್ ಕ್ರೀಡಾಕೂಟ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ/ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸರಬೇಕು. ಅರ್ಜಿ ಮತ್ತು ಪೂರಕ ದಾಖಲೆ ಸಲ್ಲಿಸಲು ಅಕ್ಟೋಬರ್ 16 ಕೊನೆಯ ದಿನಾಂಕವಾಗಿದೆ.

ಅರ್ಜಿಗಳನ್ನು ಮಹಾನಿರ್ದೇಶಕರು ಕರ್ನಾಟಕ ಕ್ರೀಡಾ ಪ್ರಾಧಿಕಾರ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–01 ಈ ವಿಳಾಸಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಸಂಬಂಧ ಸಂದರ್ಶನವನ್ನು ಸದರಿ ವಿಳಾಸದಲ್ಲಿ ಅಕ್ಟೋಬರ್ 18 ರಂದು ನಡೆಸಲಾಗುವುದು.

ಹೆಚ್ಚಿನ ವಿವರಗಳಿಗೆ ಇಲಾಖಾ ವೆಬ್‌ಸೈಟ್ www.karnataka.gov.in/dyes ನಲ್ಲಿ ಪಡೆದುಕೊಳ್ಳಬಹುದಾಗಿದೆ ಎಂದು ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ**

ಬೆಂಗಳೂರು, ಅಕ್ಟೋಬರ್ 08 (ಕರ್ನಾಟಕ ವಾರ್ತೆ):

**ದಿನಾಂಕ: 8.10.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 38 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 40 | ಉತ್ತಮ | CO |
| 3 | ಕವಿಕ, ಮೈಸೂರುರಸ್ತೆ | 57 | ತೃಪ್ತಿಕರ | CO |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 37 | ಉತ್ತಮ | CO |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 60 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 83 | ತೃಪ್ತಿಕರ | CO |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 63 | ತೃಪ್ತಿಕರ | CO |
| **(8.10.2021 at 10.05 AM)** | | | | |
| 8 | BWSSB,ಕಾಡಬೀಸನಹಳ್ಳಿ | 58 | ತೃಪ್ತಿಕರ | $PM_{10}$ |
| 9 | ಪೀಣ್ಯ | * | * | * |
| 10 | ಬಿಟಿಎಂ ಲೇಔಟ್ | * | * | * |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| ಉತ್ತಮ (0–50) | ಕನಿಷ್ಠ ಪರಿಣಾಮ |
| ತೃಪ್ತಿಕರ (51–100) | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| ಸಾಧಾರಣ (101–200) | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| ಕಳಪೆ (201–300) | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| ಅತಿ ಕಳಪೆ (301–400) | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| ತೀವ್ರ (>401) | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 8.10.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 38 | Good | $PM_{10}$ |
| 2 | Jayanagar 5th Block, Shalini ground | 40 | Good | CO |
| 3 | KAVIKA, Mysore Road | 57 | Satisfactory | CO |
| 4 | Rajeev Gandhi Institute of Chest Disease, NIMHANS, Hombegowda Nagar | 37 | Good | CO |
| 5 | HSR Layout, near Central Silkboard | 60 | Satisfactory | $PM_{10}$ |
| 6 | City Railway Station, Magestic, Bengaluru | 83 | Satisfactory | CO |
| 7 | Saneguruvanahalli, NisargaBhavan, KSPCB, Shivanagara | 63 | Satisfactory | CO |
| **(8.10.2021 at 10.05 AM)** | | | | |
| 8 | BWSSB, Kadabesanahalli | 58 | Satisfactory | $PM_{10}$ |
| 9 | Peenya | * | * | * |
| 10 | BTM Layout | * | * | * |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older adults | Severe (>401) | Respiratory effects even on healthy people |